# All India Radio: Bangalore
# National Bulletin In Kannada
# 04.10.2026 1.10 p.m.

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**04.10.2026 1.10 p.m.**

**<><><><>**

ಮುಖ್ಯಾಂಶಗಳು

1. ಪಿಎಂ-ಸೇತು ಯೋಜನೆಗೆ ಇಂದಿಗೆ ಒಂದು ವರ್ಷ ಪೂರ್ಣ: ಸರ್ಕಾರಿ ಐಟಿಐಗಳ ಆಧುನೀಕರಣ ಪ್ರಧಾನ ಗುರಿ
2. ಇಸ್ರೇಲ್ ಸ್ವಾತಂತ್ರ್ಯದಿನದಂದು ಜ್ಯೋತಿ ಬೆಳಗಿಸಲು ಪ್ರಧಾನಿ ನರೇಂದ್ರ ಮೋದಿ, ಕ್ಯಾಪ್ಟನ್ ಸ್ಮಿತ್ ಗೆ ಪ್ರಧಾನಿ ಬೆಂಜಮಿನ್ ಆಹ್ವಾನ
3. ಏಷ್ಯನ್ ಗೇಮ್ಸ್ ನಲ್ಲಿ ಚಿನ್ನ ಗೆದ್ದು ತಾಯ್ನಾಡಿಗೆ ಮರಳಿದ ಭಾರತ ಮಹಿಳಾ ಹಾಕಿ ತಂಡಕ್ಕೆ ಬೆಂಗಳೂರಿನಲ್ಲಿ ಭವ್ಯ ಸ್ವಾಗತ
4. ೨೦ನೇ ಏಷ್ಯನ್ ಕ್ರೀಡಾಕೂಟಕ್ಕೆ ಇಂದು ವರ್ಣರಂಜಿತ ತೆರೆ; ೨೧ ಚಿನ್ನ ಸೇರಿ ೭೫ ಪದಕಗಳನ್ನು ಗೆದ್ದ ಭಾರತಕ್ಕೆ ೪ನೇ ಸ್ಥಾನ

<><><><>

ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಪ್ರಧಾನಮಂತ್ರಿ ಕೌಶಲ್ಯ ಮತ್ತು ಉದ್ಯೋಗಾರ್ಹತೆ ಪರಿವರ್ತನೆ ಯೋಜನೆ-ಪಿಎಂ ಸೇತುಗೆ ಇಂದು ಒಂದು ವರ್ಷ ಪೂರ್ಣಗೊಂಡಿದೆ. ಕಳೆದ ವರ್ಷ ಅಕ್ಟೋಬರ್ ೪ರಂದು ಈ ಯೋಜನೆಯನ್ನು ಆರಂಭಿಸಲಾಗಿತ್ತು. ಕೈಗಾರಿಕೆ ಆಧಾರಿತ ಆಡಳಿತವನ್ನು ಬಲಪಡಿಸುವುದು, ತರಬೇತಿ ಮೂಲಸೌಕರ್ಯವನ್ನು ಉನ್ನತೀಕರಿಸುವುದು ಹಾಗೂ ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಯ ಅಗತ್ಯಗಳಿಗೆ ಅನುಗುಣವಾಗಿ ಬೇಡಿಕೆ ಆಧಾರಿತ ಕೋರ್ಸ್‌ಗಳನ್ನು ಉತ್ತೇಜಿಸುವುದು ಯೋಜನೆಯ ಉದ್ದೇಶವಾಗಿದೆ. ದೇಶದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಆಧುನಿಕ ಮತ್ತು ಕೈಗಾರಿಕಾ ಅಗತ್ಯಗಳಿಗೆ ಹೊಂದಿಕೊಳ್ಳುವ ತರಬೇತಿ ಸಂಸ್ಥೆಗಳಾಗಿ ಪರಿವರ್ತಿಸುವ ಮೂಲಕ ವೃತ್ತಿಪರ ತರಬೇತಿಯ ಗುಣಮಟ್ಟ ಮತ್ತು ಪ್ರಸ್ತುತತೆಯನ್ನು ಹೆಚ್ಚಿಸುವ ಗುರಿಯನ್ನು ಪಿಎಂ-ಸೇತು ಹೊಂದಿದೆ.

<><><><>

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಇಸ್ರೇಲ್‌ನ ಮುಂಬರುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ವಿಧ್ಯುಕ್ತ ಜ್ಯೋತಿಯನ್ನು ಬೆಳಗಿಸಲು ಭಾರತೀಯ ಪೈಲಟ್ ಕ್ಯಾಪ್ಟನ್ ಸ್ಮಿತ್ ಮಚ್ಚರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಿದ್ದಾರೆ. ಕ್ಯಾಪ್ಟನ್ ಮಚ್ಚರ್ ಅವರೊಂದಿಗಿನ ದೂರವಾಣಿ ಸಂಭಾಷಣೆಯಲ್ಲಿ ನೆತನ್ಯಾಹು, ಭಾರತೀಯ ಪೈಲಟ್ ಅವರನ್ನು ಭಾರತ, ಇಸ್ರೇಲ್ ಮತ್ತು ವಿಶ್ವದ ಹೀರೋ ಎಂದು ಶ್ಲಾಘಿಸಿದ್ದಾರೆ. ಕ್ಯಾಪ್ಟನ್ ಮಚ್ಚರ್ ಶೀಘ್ರ ಮತ್ತು ಸಂಪೂರ್ಣ ಚೇತರಿಸಿಕೊಳ್ಳಲಿ ಎಂದು ಅವರು ಹಾರೈಸಿದ್ದು, ಪೈಲಟ್ ಕುಟುಂಬಕ್ಕೆ ತಮ್ಮ ಶುಭಾಶಯಗಳನ್ನು ತಿಳಿಸಿದ್ದಾರೆ.

<><><><>

ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಮರ ಹುತಾತ್ಮ ಸುಬ್ರಹ್ಮಣ್ಯ ಶಿವ ಅವರ ಜಯಂತಿಯಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಇಂದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಉಪ ರಾಷ್ಟ್ರಪತಿ, ‘ಸುಬ್ರಹ್ಮಣ್ಯ ಶಿವ ಅವರು ತಮಿಳುನಾಡಿನ ಮೂಲೆ ಮೂಲೆಯಲ್ಲೂ ’ವಂದೇ ಮಾತರಂ’ ಎಂಬ ಸ್ವಾತಂತ್ರ್ಯದ ಜಯಘೋಷವನ್ನು ಪ್ರತಿಧ್ವನಿಸುವಂತೆ ಮಾಡಿದರು ಹಾಗೂ ಜನರ ಮನಸ್ಸಿನಲ್ಲಿ ದೇಶಪ್ರೇಮ ಮತ್ತು ಸ್ವಾತಂತ್ರ್ಯದ ಹಂಬಲವನ್ನು ಜಾಗೃತಗೊಳಿಸಿದರು" ಎಂದು ಸ್ಮರಿಸಿದ್ದಾರೆ.

<><><><>

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಸ್ವಾತಂತ್ರ್ಯ ಹೋರಾಟಗಾರ ಶ್ಯಾಮ್‌ಜಿ ಕೃಷ್ಣ ವರ್ಮಾ ಅವರ ಜಯಂತಿಯಂದು ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಉಪರಾಷ್ಟ್ರಪತಿ, ‘ಭಾರತದ ಸ್ವಾತಂತ್ರ್ಯಕ್ಕಾಗಿ ಅವರ ಅಚಲ ಬದ್ಧತೆ, ನಿರ್ಭೀತ ಮನೋಭಾವ ಹಾಗೂ ವಿದೇಶಗಳಲ್ಲಿದ್ದ ಭಾರತೀಯರಲ್ಲಿ ಕ್ರಾಂತಿಕಾರಿ ರಾಷ್ಟ್ರೀಯತೆಯನ್ನು ಪ್ರೇರೇಪಿಸುವ ಮತ್ತು ಬೆಳೆಸುವಲ್ಲಿ ಅವರ ಪ್ರವರ್ತಕ ಪ್ರಯತ್ನಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಶಾಶ್ವತ ಭಾಗವಾಗಿ ಉಳಿದಿವೆ" ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಶ್ಯಾಮ್‌ಜಿ ಕೃಷ್ಣ ವರ್ಮಾ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಟ್ಟಿದ್ದರು. ಮಾತೃಭೂಮಿಯ ಗೌರವವನ್ನು ರಕ್ಷಿಸುವಲ್ಲಿ ಅವರ ಧೈರ್ಯ ಮತ್ತು ಭಕ್ತಿಯನ್ನು ದೇಶವು ಎಂದಿಗೂ ನೆನಪಿಸಿಕೊಳ್ಳುತ್ತದೆ" ಎಂದು ಹೇಳಿದ್ದಾರೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ, ದೇಶಾದ್ಯಂತ, ಜನ ಸೇವೆಯೇ ದೇಶ ಸೇವೆ ಎಂಬ ಅಭಿಯಾನ ನಡೆಯುತ್ತಿದೆ. ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ಈಶಾನ್ಯ ರಾಜ್ಯಗಳ ಪ್ರಗತಿ ಕುರಿತ ಒಂದು ವರದಿ ಇಲ್ಲಿದೆ. ದೇಶದ ಈಶಾನ್ಯ ಭಾಗದ ಅಭಿವೃದ್ಧಿಗೆ ಭೌಗೋಳಿಕ ಅಂತರವೇ ಅಡ್ಡಿಯಾಗಿರಲಿಲ್ಲ. ಹಲವು ದಶಕಗಳ ಕಾಲ ದೂರದ ನೆಪವೊಡ್ಡಿ ಈ ಪ್ರದೇಶವನ್ನು ಅಭಿವೃದ್ಧಿಯಿಂದ ದೂರವಿಡಲಾಗಿತ್ತು. ಸ್ವಾತಂತ್ರ್ಯಾನಂತರ ಆರು ದಶಕಗಳವರೆಗೆ ಈಶಾನ್ಯ ಭಾಗದ ಹಲವು ರಾಜ್ಯ ರಾಜಧಾನಿಗಳಿಗೆ ರೈಲು ಸಂಪರ್ಕವೇ ಇರಲಿಲ್ಲ. ಈ ಪರಿಸ್ಥಿತಿಯಲ್ಲಿ ಹಂತ ಹಂತವಾಗಿ ಬದಲಾವಣೆ ತರಲಾಗಿದೆ. ಅಗಲ ಗೇಜ್ ರೈಲು ಮಾರ್ಗಗಳು ಅಗರ್ತಲಾ ಮತ್ತು ನಹರ್‌ಲಾಗುನ್‌ವರೆಗೆ ತಲುಪಿವೆ. ೨೦೨೫ರ ಸೆಪ್ಟೆಂಬರ್‌ನಲ್ಲಿ ಬೈರಾಬಿ-ಸೈರಾಂಗ್ ರೈಲು ಮಾರ್ಗ ಪೂರ್ಣಗೊಂಡು ಐಜ್ವಾಲ್‌ಗೂ ರೈಲು ಸಂಪರ್ಕ ದೊರೆತಿದ್ದು, ಮಿಜೋರಾಂನಲ್ಲಿ ಮೊದಲ ಬಾರಿಗೆ ರೈಲು ಸಂಚಾರ ಆರಂಭವಾಗಿದೆ. ಈಶಾನ್ಯ ರಾಜ್ಯಗಳು ಇದೀಗ ದೇಶದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರದೇಶಗಳಲ್ಲೊಂದಾಗಿವೆ. ಜಮ್ಮು-ಕಾಶ್ಮೀರದಲ್ಲೂ ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಮಾರ್ಗ ೨೮ ವರ್ಷಗಳ ನಿರ್ಮಾಣದ ಬಳಿಕ ೨೦೨೫ರ ಜೂನ್‌ನಲ್ಲಿ ಸಂಚಾರಕ್ಕೆ ಮುಕ್ತವಾಗಿದೆ. ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆಯಾದ ಚೆನಾಬ್ ಸೇತುವೆಯನ್ನು ಒಳಗೊಂಡಿರುವ ಈ ಮಾರ್ಗದಲ್ಲಿ ಚಳಿಗಾಲದಲ್ಲೂ ರೈಲು ಸಂಚಾರ ಮುಂದುವರಿಯುತ್ತಿದೆ. ತಲುಪಲು ಕಷ್ಟವಾಗಿದ್ದ ಪ್ರದೇಶಗಳು ಈಗ ಸುಲಭವಾಗಿ ತಲುಪಬಹುದಾದ ಸ್ಥಳಗಳಾಗಿವೆ.

<><><>

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ವಿವಿಧ ಸಚಿವಾಲಯಗಳಿಗೆ ಸಂಬಂಧಿಸಿದ ಹಲವಾರು ಸಂಸದೀಯ ಸಮಿತಿಗಳನ್ನು ಪುನರ್ ರಚಿಸಿದ್ದಾರೆ. ಲೋಕಸಭೆಯ ೨೧ ಸದಸ್ಯರು ಮತ್ತು ರಾಜ್ಯಸಭೆಯ ೧೦ ಸದಸ್ಯರನ್ನು ಒಳಗೊಂಡ ಹಣಕಾಸು ಸಮಿತಿಯ ಅಧ್ಯಕ್ಷರಾಗಿ ಬಿಜೆಪಿ ಸಂಸದ ಭರ್ತೃಹರಿ ಮಹತಾಬ್ ಅವರನ್ನು ನೇಮಿಸಲಾಗಿದೆ. ಬಿರ್ಲಾ ಅವರು ಕಾಂಗ್ರೆಸ್ ಸಂಸದ ಶಶಿ

ತರೂರ್ ಅವರನ್ನು ವಿದೇಶಾಂಗ ವ್ಯವಹಾರಗಳ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ. ಇದರಲ್ಲಿ ಕೆಳಮನೆಯಿಂದ ೨೧ ಸದಸ್ಯರು ಮತ್ತು ಮೇಲ್ಮನೆಯಿಂದ ೧೦ ಸದಸ್ಯರು ಇದ್ದಾರೆ. ರೈಲ್ವೆ ಸಮಿತಿಯ ನೇತೃತ್ವವನ್ನು ಬಿಜೆಪಿ ಸಂಸದ ಸುಧೀರ್ ಗುಪ್ತಾ ವಹಿಸಲಿದ್ದಾರೆ. ರಾಸಾಯನಿಕ ಮತ್ತು ರಸಗೊಬ್ಬರಗಳ ಸಮಿತಿಯ ಅಧ್ಯಕ್ಷರಾಗಿ ಬಿರ್ಲಾ ಅವರು ಲೋಕಸಭಾ ಸಂಸದ ಡಾ.ಕಾಕೋಲಿ ಘೋಷ್ ದಸ್ತಿದಾರ್ ಅವರನ್ನು ನೇಮಿಸಿದ್ದಾರೆ.

<><><>

ನೀತಿ ಆಯೋಗದ ಸದಸ್ಯ ರಾಜೀವ್ ಗೌಬಾ, ವೇಗವಾಗಿ ಬದಲಾಗುತ್ತಿರುವ ಭೌಗೋಳಿಕ ರಾಜಕೀಯ, ತಾಂತ್ರಿಕ ಮತ್ತು ಆರ್ಥಿಕ ಪರಿಸರದ ಜತೆಗೆ ನಿಯಂತ್ರಕ ಚೌಕಟ್ಟುಗಳು ವಿಕಸನಗೊಳ್ಳುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ನೀತಿ ನಿರೂಪಕರ ಮುಂದಿರುವ ಸವಾಲು ನಿಯಂತ್ರಣ ಮತ್ತು ಬೆಳವಣಿಗೆಯ ನಡುವೆ ಆಯ್ಕೆ ಮಾಡುವುದಲ್ಲ, ಬದಲಿಗೆ ನಾವೀನ್ಯತೆ, ಸ್ಪರ್ಧೆ ಮತ್ತು ಹೂಡಿಕೆಯನ್ನು ಬೆಂಬಲಿಸುವಾಗ ಅಪಾಯಗಳನ್ನು ನಿರ್ವಹಿಸುವ ನಿಯಮಗಳನ್ನು ಅಭಿವೃದ್ಧಿಪಡಿಸುವುದು ಎಂದು ಅವರು ಒತ್ತಿ ಹೇಳಿದರು.

<><><>

ಜಪಾನ್‌ನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಐತಿಹಾಸಿಕ ಚಿನ್ನದ ಪದಕ ಗೆದ್ದು ತಾಯ್ನಾಡಿಗೆ ಮರಳಿದ ಭಾರತೀಯ ಮಹಿಳಾ ಹಾಕಿ ತಂಡದ ಸದಸ್ಯರಿಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಜೃಂಭಣೆಯ ಹಾಗೂ ಭಾವಪೂರ್ಣ ಸ್ವಾಗತ ಕೋರಲಾಯಿತು. ಭಾರತೀಯ ಮಹಿಳಾ ಹಾಕಿ ತಂಡವು ಬರೋಬ್ಬರಿ ೪೪ ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಏಷ್ಯನ್ ಗೇಮ್ಸ್‌ನಲ್ಲಿ ದೇಶಕ್ಕೆ ಚಿನ್ನದ ಪದಕ ತಂದುಕೊಟ್ಟು ಹೊಸ ಇತಿಹಾಸ ಬರೆದಿದೆ. ತಂಡದ ಆಟಗಾರ್ತಿಯರು ಸಾಯ್ ಬೆಂಗಳೂರು ಕೇಂದ್ರದಲ್ಲಿಯೇ ಸುದೀರ್ಘ ತರಬೇತಿ ಪಡೆದಿದ್ದರು. ಏಷ್ಯನ್ ಗೇಮ್ಸ್‌ನ ಯಶಸ್ವಿ ಅಭಿಯಾನದ ನಂತರ, ಆಟಗಾರ್ತಿಯರು ಕೆಲ ದಿನಗಳ ಮಟ್ಟಿಗೆ ತಮ್ಮ ಸ್ವಂತ ರಾಜ್ಯಗಳಿಗೆ ತೆರಳಿ ಕುಟುಂಬಸ್ಥರನ್ನು ಭೇಟಿ ಮಾಡಲಿದ್ದಾರೆ. ಮುಂದಿನ ಅಂತಾರಾಷ್ಟ್ರೀಯ ಪಂದ್ಯಾವಳಿಗಳಿಗೆ ಆಟಗಾರ್ತಿಯರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ, ಸಣ್ಣ ವಿರಾಮದ ಬಳಿಕ ಸಾಯ್ ಬೆಂಗಳೂರು ಕೇಂದ್ರದಲ್ಲಿ ರಾಷ್ಟ್ರೀಯ ತರಬೇತಿ ಶಿಬಿರವನ್ನು ಪುನರಾರಂಭಿಸಲಾಗುವುದು ಎಂದು ಪ್ರಾಧಿಕಾರ ತಿಳಿಸಿದೆ.

<><><>

೨೦೨೬ರ ಐಚಿ-ನಗೋಯಾ ಏಷ್ಯನ್ ಗೇಮ್ಸ್ ಇಂದು ಮುಕ್ತಾಯಗೊಳ್ಳಲಿದ್ದು, ಎರಡು ವಾರಗಳಿಗಿಂತ ಹೆಚ್ಚು ರೋಮಾಂಚಕಾರಿ ಕ್ರೀಡಾ ಉತ್ಸವಕ್ಕೆ ತೆರೆ ಬೀಳಲಿದೆ. ಸಮಾರೋಪ ಸಮಾರಂಭವು ಜಪಾನ್‌ನ ನಗೋಯಾ ಸಿಟಿ ಮಿಜುಹೊ ಪಾರ್ಕ್ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಸಮಾರೋಪ ಸಮಾರಂಭವು ಭಾರತೀಯ ಕಾಲಮಾನ ಸಂಜೆ ೬ಗಂಟೆಗೆ ಪ್ರಾರಂಭವಾಗಲಿದೆ. ಭಾರತವು ಈ ವರ್ಷದ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ೨೧ ಚಿನ್ನ, ೨೭ ಬೆಳ್ಳಿ ಮತ್ತು ೩೭ ಕಂಚು ಸೇರಿದಂತೆ ಒಟ್ಟು ೮೫ ಪದಕಗಳೊಂದಿಗೆ ಒಟ್ಟಾರೆ ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನವನ್ನು ಗಳಿಸಿದೆ. ಚೀನಾ, ಜಪಾನ್ ಮತ್ತು ದಕ್ಷಿಣ ಕೊರಿಯಾ ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿವೆ. ಸಮಾರೋಪ ಸಮಾರಂಭಕ್ಕೆ ಭಾರತದ ಮಹಿಳಾ ಧ್ವಜಧಾರಿ ಶೂಟಿಂಗ್ ಸ್ಟಾರ್ ನೀರೂ ಧಂಡಾ ಎಂದು ದೃಢಪಡಿಸಲಾಗಿದೆ. ಅವರು ನಗೋಯಾದಲ್ಲಿ ಹೆಮ್ಮೆಯಿಂದ ತ್ರಿವರ್ಣ ಧ್ವಜವನ್ನು ಹಿಡಿದು ತಂಡವನ್ನು ಮುನ್ನಡೆಸಲಿದ್ದಾರೆ. ಸಮಾರಂಭವು ಕ್ರೀಡಾಪಟುಗಳ ಮೆರವಣಿಗೆ ಮತ್ತು ಕ್ರೀಡಾಕೂಟದ ಔಪಚಾರಿಕ ಸಮಾರೋಪ ಸೇರಿದಂತೆ ಸಾಂಪ್ರದಾಯಿಕ ಸಮಾರೋಪ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>